Environmental Social Justice & Governance Initiatives

*Organization in Special Consultative Status with the Economic and Social Council since 2011*

1572, 36th Cross, 100 Feet Ring Road,
Banashankari II Stage,
Bangalore 560070. INDIA
Tel: 91-80-26713559-3561
Voice/Fax: 91-80-26713316
Email: esg@esgindia.org
Web: www.esgindia.org

**ಪರಿಸರ ಬೆಂಬಲ ತಂಡ (Environment Support Group) ದಿಂದ**

## "ಹಬ್ಬಗಳ ಋತುವಿನಲ್ಲಿ ಕಾರ್ಯಸಾಧ್ಯವಾಗುವ ಸಾಮಾಜಿಕ ಜವಾಬ್ದಾರಿಗಳು ಮತ್ತು ಪರಿಸರ ಸ್ನೇಹಿ ಆಚರಣೆಯ ಸಾದ್ಯತೆಯ ಅಲೋಚನಾ ಕಾರ್ಯಾಗಾರ"ಕ್ಕೆ ಆಹ್ವಾನ



ಬರುವ ಮುಂಗಾರಿನಲ್ಲಿ ಸರಣಿ ಹಬ್ಬಗಳ ಮೂಲಕ ಮತ್ತೊಮ್ಮೆ ನಗರವು ಅಕ್ಷರಶಃ ಬೃಹತ್ ಕಸಯುಕ್ತವಾಗಿ ಬದಲಾಗಿ ಗಮನ ಸೆಳೆಯುತ್ತದೆ. ಈ ಉತ್ಸವಗಳ ಸರಣಿಗಳಿಗೆ ನಗರವು ಸಜ್ಜುಗೊಳ್ಳುತ್ತಿದೆ. ಕೆರೆಗಳಲ್ಲಿ, ರಾಜಕಾಲುವೆಗಳಲ್ಲಿ ದೊಡ್ಡ ಪ್ರಮಾಣದ ಕಸವನ್ನು ಹಾಕಲಾಗುತ್ತದೆ ಜೊತೆಗೆ ನೂರಾರು ಮೂರ್ತಿಗಳನ್ನು ಮತ್ತು ಇತರೆ ವಿಷಕಾರಿ ವಸ್ತುಗಳನ್ನು ಕೂಡ. ಇದರಿಂದ ಜಲಮೂಲಗಳಲ್ಲಿನ ಜೀವ ವೈವಿಧ್ಯಗಳ ಮೇಲಾಗುವ ದುಷ್ಪರಿಣಾಮವನ್ನು ಕಡಿಮೆಮಾಡಲು ವಿಗ್ರಹಗಳ ತಯಾರಿಕೆಯಲ್ಲಿ ವಿಷಕಾರಿ ಬಣ್ಣಗಳ ಬಳಕೆಯನ್ನು ತಪ್ಪಿಸಬೇಕಾಗುತ್ತದೆ. ಆದರೆ ಆಚರಣೆಗೂ ಮುಂಚೆ ನಮ್ಮ ಬೇಜವಾಬ್ದಾರಿತನ ಮತ್ತು ನಾಗರೀಕ ಪ್ರಜ್ಞೆಯ ಅರಿವಾಗಬೇಕು ನಂತರವಷ್ಟೇ ಹಬ್ಬಗಳನ್ನು ಆಚರಿಸುವುದು ಸೂಕ್ತವೆನಿಸುತ್ತದೆ. ಇವೆಲ್ಲಾ ಕೆಲವರಿಗೆ ಅರ್ಥವಾಗಬಹುದು, ಕೆಲವರಿಗೆ ಆಗದಿರಬಹುದು ಮತ್ತು ಕೆಲವರು ಅದರ ಬಗ್ಗೆ ತಲೆಕೆಡಿಸಿಕೊಳ್ಳದೇ ಇರಬಹುದು. ನಾವು ಮಾತ್ರ ನಿರಂತರವಾಗಿ ನಮ್ಮ ಅಧ್ಯಯನ, ವರದಿ ಇತ್ಯಾದಿಗಳ ಮೂಲಕ ನಿರಂತರವಾಗಿ ನಮ್ಮ ನೀರು, ಗಾಳಿ, ಮಣ್ಣು ಇವುಗಳ ರಕ್ಷಣೆಯ ಬಗ್ಗೆ ಎಚ್ಚರಿಸುತ್ತಲೇ ಬಂದಿದ್ದೇವೆ.

ಪ್ರತಿ ವರ್ಷದಂತೆ ನಾವು ಈ ಬಾರಿಯೂ ನಿಮ್ಮನ್ನು, ನಿಮ್ಮ ಕುಟುಂಬ ಮತ್ತು ನೆರೆಹೊರೆಯವರನ್ನು ತೊಡಗಿಸಿಕೊಂಡು ಈ ವರ್ಷವನ್ನು ಒಂದು ಶೂನ್ಯ ತ್ಯಾಜ್ಯ ಉತ್ಸವವರ್ಷವನ್ನಾಗಿ ಮಾಡುವ ನಿಟ್ಟಿನಲ್ಲಿ ಆಸಕ್ತಿ ಹೊಂದಿರಬಹುದಾದ ನಿಮ್ಮಗಳ ಮತ್ತು ಇಂತಹ ಇತರ ಯೋಜನೆಗಳ ಸಂಪರ್ಕಕ್ಕೆ ಉತ್ಸುಕರಾಗಿದ್ದೇವೆ!. ಅಳಿದುಳಿದ ಕೆರೆ ಮತ್ತು ಜಲಮೂಲಗಳಲ್ಲಿನ ನೀರನ್ನು ರಕ್ಷಿಸಲು, ತ್ಯಾಜ್ಯವನ್ನು ಕಡಿಮೆ ಮಾಡುವುದು, ತ್ಯಾಜ್ಯದಿಂದ ಗೊಬ್ಬರ ತಯಾರಿಸುವುದನ್ನು ಮತ್ತು ಆದಷ್ಟು ತ್ಯಾಜ್ಯವನ್ನು ಮರುಬಳಕೆ ಮಾಡುವುದನ್ನು, ನೀರಿನ ಮರುಬಳಕೆ ಮಾಡುವುದು ಮತ್ತು ವಿಷಕಾರಿಯನ್ನು ಅಂಶವನ್ನು ಪರ್ಯಾಯವಾಗಿ ಬಳಸುವುದನ್ನು ತಿಳಿಸಿ, ಮುಂಬರುವ ವರ್ಷಗಳಲ್ಲಿ ಇವುಗಳಿಂದ ನಮ್ಮದೇ ಕೈ ತೋಟವನ್ನು ಹೇಗೆ ಬೆಳೆಸಬಹುದೆಂಬುದನ್ನು ತಿಳಿಯೋಣ. ಹಬ್ಬಗಳ ಆರಂಭಿಕ ಈ ಸಂಧರ್ಭದಲ್ಲಿ ಇದು ನಿಮಗೆ, ನಿಮ್ಮ ಕುಟುಂಬಕ್ಕೆ, ನಗರ ಶುಚಿತ್ವಕ್ಕೆ ಮತ್ತು ಆ ಮೂಲಕ ಪರಿಸರಕ್ಕೆ ನೀವು ನೀಡುವ ಅತ್ಯುತ್ತಮ ಕೊಡುಗೆಯಾಗಿರುತ್ತದೆ. ಇದು ಹಬ್ಬಗಳ ಮಾಸವಾಗಿರುವುದರಿಂದ ಹೊಸದನ್ನು ಆರಂಭಿಸಲು ಉತ್ತಮ ಸಮಯವಾಗಿದೆ. ಮಹತ್ವವಾದ ಈ ಉದ್ದೇಶಕ್ಕೆ ಈ ಸಮಯವನ್ನು ಬಿಟ್ಟರೆ ಸೂಕ್ತವಾದುದು ಮತ್ತೊಂದಿಲ್ಲ.



ಹೌದು, ಕಾನೂನುಗಳು, ತೀರ್ಪುಗಳು, ನಾಗರೀಕ ಸಂಘ ಸಂಸ್ಥೆಗಳು, ವಾರ್ಡ್ ಸಮಿತಿಗಳು, ನಾಗರಿಕ ವಸತಿ ಸಂಘಟನೆಗಳು, ಬೀದಿ ಸಂಘಟನೆಗಳು, ನಾವು ಮತ್ತು ನೀವು ಎಲ್ಲರೂ ಇದ್ದೇವೆ! ನಾವೆಲ್ಲ ಒಟ್ಟು ಸೇರಿ ಹಬ್ಬಗಳಿಂದಾಗುವ ಪರಿಸರದ ಮೇಲಿನ ದುಷ್ಪರಿಣಾಮಗಳನ್ನು ತೊಡೆದುಹಾಕುವ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲಾಗುವ ಪರಿಣಾಮಗಳನ್ನು ಕಡಿಮೆಮಾಡುವ ಕಲಿಕೆಯ ಈ ಕಾರ್ಯಾಗಾರದಲ್ಲಿ ಪರಸ್ಪರ ಸೇರಿ, ಒಬ್ಬರಿಂದೊಬ್ಬರು ಕಲಿಯೋಣ. ನಮ್ಮ ನಗರವನ್ನು ಸ್ವಚ್ಛ ಉದ್ಯಾನ ನಗರವನ್ನಾಗಿ ಮಾಡಲು ಸಹಾಯ ಮಾಡುವ ಈ ನಿಟ್ಟಿನಲ್ಲಿ ನಮ್ಮ ಸಾಮಾಜಿಕ ಜವಾಬ್ದಾರಿಗಳ ಮತ್ತು ಪರಿಸರ ಪ್ರಜ್ಞೆ ಬಗ್ಗೆ ಚರ್ಚೆ ಮತ್ತು ಮಾತುಕತೆ, ಮತ್ತು ಕಾರ್ಯ ಚಟುವಟಿಕೆಯಲ್ಲಿ ಭಾಗಿಯಾಗೋಣ.



ಬನ್ನಿ! ನಮ್ಮ ಈ ಕಾರ್ಯಾಗಾರದಲ್ಲಿ ನಿಮ್ಮ ಕುಟುಂಬದವರು, ಸ್ನೇಹಿತರು, ನೆರೆಹೊರೆಯವರು, ಮಕ್ಕಳು, ಹಿರಿಯ ನಾಗರೀಕರು ಹೀಗೆ ಎಲ್ಲರೂ ಪಾಲ್ಗೊಂಡು ಈ ಹಬ್ಬಗಳ ಸಮಯದಲ್ಲಿ ತಮ್ಮ ಸಾಮಾಜಿಕ ಜವಾಬ್ದಾರಿಗಳಲ್ಲಿ ಅನೇಕ ಹೊಸ ಸಾದ್ಯತೆಗಳನ್ನು ಅನ್ವೇಷಿಸಿ, ತ್ಯಾಜ್ಯ ಮರುಬಳಕೆಯಲ್ಲಿ ಸೃಜನಶೀಲ ಕಲ್ಪನೆಗಳನ್ನು ಆಲೋಚಿಸೋಣ.

ನಿಮ್ಮ ಬಾಲ್ಯವಸ್ಥೆಯನ್ನು ಜಾಗೃತಗೊಳಿಸಿ, ಕೈಯನ್ನು ಕೆಸರುಗೊಳಿಸಿ, ಮಣ್ಣು ಮತ್ತು ಗೊಬ್ಬರದ ಸುವಾಸನೆಯನ್ನು ಅನುಭವಿಸಿ, ಮೂರ್ತಿಗಳ ತಯಾರಿಕೆ, ಗೊಬ್ಬರದ ತಯಾರಿಕಾ ಹಂತದ ಅನುಭವ, ಎರೆಹುಳುಗೊಬ್ಬರ ತಯಾರಿಕೆಯಲ್ಲಿ ಎರೆಹುಳುಗಳನ್ನು ವೀಕ್ಷಿಣೆ, ಅವನ್ನು ನಿಮ್ಮ ಸಾಕುಪ್ರಾಣಿಯನ್ನಾಗಿ ಮಾಡಿಕೊಂಡ ಕೈತೋಟವೊಂದರ ಆರಂಭ, ಟೊಮೆಟೋ, ಮೆಣಸಿನಕಾಯಿ, ಪಾಲಕ್ ಮುಂತಾದ ಬೆಳೆ, ಪರಿಸರ ಸ್ನೇಹಿ ಬಣ್ಣಗಳನ್ನು ತಯಾರಿಕೆ, ತ್ಯಾಜ್ಯದಿಂದ ಕಲೆ ಉತ್ಪಾದನೆ, ಸಾಂಪ್ರದಾಯಿಕ ಉಡುಗೊರೆ ತಯಾರಿಕೆ ಮತ್ತು ನಾವು ಹೇಗೆ ಜಲಚರಗಳನ್ನು ರಕ್ಷಿಸಬಹುದೆಂಬುದನ್ನು, ತ್ಯಾಜ್ಯ ನೀರಿನ ಮರುಬಳಕೆ ಮತ್ತು ಮಳೆ ನೀರು ಕೊಯ್ಲಿನ ಮೂಲಕ ನೀರಿನ ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದನ್ನು ತಿಳಿಯೋಣ!. ನಮ್ಮ ಜೀವನದ ಹಾದಿಯಲ್ಲಿ ಇವುಗಳೆಲ್ಲವನ್ನೂ ರೂಪಿಸಿಕೊಳ್ಳೋಣ..... ಇವುಗಳ ಜೊತೆಗೆ ಇನ್ನು ಹೆಚ್ಚಿನ ವಿಷಯಗಳನ್ನು ಉದಾಹರಣೆಯ ಸಮೇತ ಚರ್ಚೆ, ಪ್ರದರ್ಶನ ಮತ್ತು ಪ್ರಾಯೋಗಿಕ ಅನುಭವ, ಸಾಕ್ಷಚಿತ್ರ, ಪರಸ್ಪರ ಮಾತುಕತೆ ಮೂಲಕ ವಿಹರಿಸೋಣ!!.

**ಕಾರ್ಯಾಗಾರಕ್ಕೆ ನಿಗದಿತ ಕೊಡುಗೆ: ಒಬ್ಬರಿಗೆ ರೂ.350/–**

**ದಿನಾಂಕ: ಶನಿವಾರ, ಆಗಸ್ಟ್ 08, 2015** **ಸಮಯ: ಬೆಳಗ್ಗೆ 10.00 ರಿಂದ ಸಂಜೆ 5.00 ರವರೆಗೆ.**

**ಸ್ಥಳ: ಪರಿಸರ ಬೆಂಬಲ ತಂಡ, 1572, ಸಪ್ತಗಿರಿ, 100 ಅಡಿ ವರ್ತುಲ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560070**

**ದೂರವಾಣಿ: 91080–26713559/60/61. Email: shashi@esgindia.org/pushpa@esgindia.org.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: www.esgindia.org**



ESG is a Public Charitable Trust with clearance per Foreign Contribution Regulation Act and eligible for tax exemptions per Sec. 80G and 12A of the Indian Income Tax Act.